# ಕನ್ನಡ / KANNADA

## (ಕಡ್ಡಾಯ ಪತ್ರಿಕೆ) / (Compulsory)

ವೇಳೆ: **ಮೂರು** ಗಂಟೆ
*Time Allowed :* ***Three*** *Hours*

ಗರಿಷ್ಠ ಅಂಕಗಳು : **300**
*Maximum Marks :* ***300***

### ಪ್ರಶ್ನೆ ಪತ್ರಿಕೆ ನಿರ್ದಿಷ್ಟ ಸೂಚನೆಗಳು

**ಪ್ರಶ್ನೆಗಳನ್ನು ಉತ್ತರಿಸುವ ಮುನ್ನ ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಎಚ್ಚರಿಕೆಯಿಂದ ಓದಿರಿ :**

ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಬೇಕು.

ಪ್ರಶ್ನೆ/ಪ್ರಶ್ನೆಯ ಭಾಗಗಳಿಗೆ ಅನ್ವಯವಾಗುವ ಅಂಶಗಳನ್ನು ಅವುಗಳ ಎದುರಿಗೆ ಕೊಡಲಾಗಿದೆ.

ಉತ್ತರಗಳನ್ನು ಪ್ರಶ್ನೆಯಲ್ಲಿ ಸೂಚಿಸದ ಹೊರತು, **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಎಲ್ಲೆಲ್ಲಿ ಪ್ರಶ್ನೆಗಳಲ್ಲಿ ಪದಗಳ ಮಿತಿಯನ್ನು ಸೂಚಿಸಲಾಗಿದೆಯೋ ಆ ಸೂಚನೆಯನ್ನು ಪಾಲಿಸಬೇಕು. ಪದಗಳ ಮಿತಿ ಸೂಚಿಸಿದ್ದಕ್ಕಿಂತ ಹೆಚ್ಚು ಅಥವಾ ಕಡಿಮೆಯಾದಲ್ಲಿ ಅಂಕಗಳನ್ನು ಕಡಿತಗೊಳಿಸಲಾಗುವುದು.

ಯಾವುದಾದರೂ ಪುಟ ಅಥವಾ ಪುಟದ ಭಾಗವನ್ನು ಪ್ರಶ್ನೆ ಸಹಿತವಾದ ಉತ್ತರ ಪತ್ರಿಕೆಯಲ್ಲಿ ಖಾಲಿ ಬಿಟ್ಟಲ್ಲಿ, ಆ ಜಾಗವನ್ನು ಸ್ಪಷ್ಟವಾಗಿ ಪೆನ್ನಿನಿಂದ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*All questions are to be attempted.*

*The number of marks carried by a question / part is indicated against it.*

*Answers must be written in* ***KANNADA (Kannada script)*** *unless otherwise directed in the question.*

*Word limit in questions, wherever specified, should be adhered to and if answered in much longer or shorter than the prescribed length, marks may be deducted.*

*Any page or portion of the page left blank in the Question-cum-Answer Booklet must be clearly struck off.*

**Q1. ಕೆಳಕಂಡ ಯಾವುದಾದರೂ ಒಂದು ವಿಷಯದ ಬಗ್ಗೆ 600 ಪದಗಳ ಮಿತಿಯೊಳಗೆ ಪ್ರಬಂಧ ಬರೆಯಿರಿ :** *100*

(a) ಕೊಳ್ಳುಬಾಕ ಜೀವನಶೈಲಿ ಮತ್ತು ಪರಿಸರ

(b) ಮೊಬೈಲ್ ಫೋನಿನ ಗೀಳು

(c) ಆನ್‌ಲೈನ್ ಶಿಕ್ಷಣದ ಮಿತಿಗಳು

(d) ಭಯೋತ್ಪಾದನೆ : ಒಂದು ಸವಾಲು

**Q2. ಕೆಳಗೆ ನೀಡಲಾಗಿರುವ ಗದ್ಯಭಾಗವನ್ನು ಎಚ್ಚರಿಕೆಯಿಂದ ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ನೇರ, ಸರಳ, ಸ್ಪಷ್ಟ ಮತ್ತು ಸಂಕ್ಷಿಪ್ತವಾಗಿ ಉತ್ತರಿಸಿ :** *12×5=60*

ವ್ಯಯಸಾಯ ಮಾಡುವ ರೈತನು ಆಹಾರ ಧಾನ್ಯಗಳನ್ನು ಬೆಳೆಯುವುದರ ಜೊತೆಗೆ ಕೈಗಾರಿಕೆಗಳಿಗಾಗಿ ಕಚ್ಚಾ ಸಾಮಗ್ರಿಗಳನ್ನೂ ಬೆಳಯುತ್ತಾನೆ. ಹತ್ತಿಯು ಹತ್ತಿಗಿರಣಿ ಮತ್ತು ಯಂತ್ರ ಚಾಲಿತ ಮಗ್ಗಗಳಲ್ಲಿ ಬಟ್ಟೆಯ ರೂಪವನ್ನು ತಳೆಯುತ್ತದೆ. ವಾಹನಗಳು ಸರಕುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುತ್ತವೆ. ಒಂದು ವರ್ಷದಲ್ಲಿ ಯಾವುದೇ ದೇಶದಲ್ಲಿ ಉತ್ಪಾದಿಸಲಾದ ಸಾಮಗ್ರಿ ಮತ್ತು ಸೇವೆಗಳ ಒಟ್ಟು ಮೂಲ್ಯವನ್ನು ಅದರ ಒಟ್ಟು ದೇಶೀಯ ಉತ್ಪನ್ನವೆಂದು ಕರೆಯಲಾಗುತ್ತದೆ, ಎನ್ನುವುದು ನಮಗೆ ತಿಳಿದಿದೆ. ರಫ್ತು ಮಾಡುವುದರಿಂದ ನಮಗೆ ಬೆಲೆ ಸಿಗುತ್ತದೆ, ಆಮದು ಮಾಡಿಕೊಳ್ಳುವುದರಿಂದ ನಾವು ಬೆಲೆ ತೆರುತ್ತೇವೆ. ಒಟ್ಟು ನಿವ್ವಳ ಆದಾಯವು ಕೆಲಬಾರಿ ಧನಾತ್ಮಕವಾದದ್ದೂ, ಕೆಲವು ಬಾರಿ ಋಣಾತ್ಮಕವಾದದ್ದೂ ಅಥವಾ ಶೂನ್ಯವೂ ಆಗಬಹುದು. ನಾವು ಸ್ವೀಕರಿಸಿದ ಗಳಿಕೆಯನ್ನು ಸೇರಿಸಿದಾಗ ನಮಗೆ ದೇಶದ ಒಟ್ಟು ವಾರ್ಷಿಕ ಉತ್ಪಾದನೆಯ ವಿವರ ಸಿಗುತ್ತದೆ.

ದೇಶದ ಒಟ್ಟು ಉತ್ಪಾದನೆಗೆ ಕೊಡುಗೆಯನ್ನು ನೀಡುವ ಎಲ್ಲಾ ಚಟುವಟಿಕೆಯನ್ನು ನಾವು 'ಆರ್ಥಿಕ ಚಟುವಟಿಕೆಗಳು' ಎಂದು ಕರೆಯುತ್ತೇವೆ. ಈ ಆರ್ಥಿಕ ಚಟುವಟಿಕೆಯಲ್ಲಿ ತೊಡಗುವ ಎಲ್ಲಾ ಜನರನ್ನು, ಅವರು ಮೇಲಿನ ಅಥವಾ ಕೆಳಗಿನ – ಹೀಗೆ ಯಾವುದೇ ಶ್ರೇಣಿಯಲ್ಲಿ ಇರಲಿ; ಅವರನ್ನು ಕೆಲಸಗಾರರು (ಕಾರ್ಮಿಕರು) ಎಂದು ಕರೆಯಲಾಗುತ್ತದೆ. ಇವರಲ್ಲಿ ಕೆಲವರು – ಅನಾರೋಗ್ಯ, ಗಾಯ, ಕೆಟ್ಟ ಹವಾಮಾನ, ಹಬ್ಬ ಹರಿದಿನಗಳು, ಅಥವಾ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳು – ಈ ಎಲ್ಲ ಕಾರಣಗಳಿಂದ ತಾತ್ಕಾಲಿಕವಾಗಿ ಕೆಲಸಕ್ಕೆ ಬಾರದಿದ್ದರೂ, ಅವರನ್ನು 'ಕೆಲಸಗಾರರು' ಎಂದೇ ಪರಿಗಣಿಸಲಾಗುತ್ತದೆ. ಪ್ರಮುಖ

ಕೆಲಸಗಾರರಿಗೆ ಸಹಾಯ ಮಾಡುವ ಇತರ ಕೆಲಸಗಾರರನ್ನು 'ಕಾರ್ಮಿಕರು' ಎಂದೇ ಕರೆಯಲಾಗುತ್ತದೆ. ಸಾಮಾನ್ಯವಾಗಿ ಯಜಮಾನನಿಂದ (ಉದ್ಯೋಗದಾತ) ತಾವು ಮಾಡಿದ ಕೆಲಸಕ್ಕೆ ಪರ್ಯಾಯವಾಗಿ ಹಣ ಪಡೆಯುವವರನ್ನು ನಾವು ಕೆಲಸಗಾರರು ಎಂದು ಕರೆಯುತ್ತೇವೆ. ಆದರೆ ಅದು ಸರಿಯಲ್ಲ. ಯಾರು ಸ್ವ ಉದ್ಯೋಗವನ್ನೂ ಮಾಡುತ್ತಾನೋ ಅವನನ್ನು ಸಹ 'ಕೆಲಸಗಾರ' ಎಂದು ಕರೆಯಬೇಕಾಗುತ್ತದೆ.

ಭಾರತದಲ್ಲಿ ಕೆಲಸದ ರೀತಿಯು ಬಹುಮುಖಿಯದ್ದಾಗಿದೆ. ಕೆಲವರಿಗೆ ವರ್ಷ ಪೂರ್ತಿ ಕೆಲಸ ಸಿಕ್ಕಿರುತ್ತದೆ. ಕೆಲವರಿಗೆ ವರ್ಷದಲ್ಲಿ ಕೆಲವು ತಿಂಗಳು ಮಾತ್ರ ಕೆಲಸ ದೊರಕುತ್ತದೆ. ಬಹುಪಾಲು ಕೆಲಸಗಾರರಿಗೆ ಅವರ ಕೆಲಸಕ್ಕೆ ಸರಿಯಾದ ವೇತನ ಸಿಗುವುದಿಲ್ಲ. ಕೆಲಸಗಾರರ ಸಂಖ್ಯೆಯನ್ನು ನಿರ್ಣಯಿಸುವ ಸಂದರ್ಭದಲ್ಲಿ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿದ ಎಲ್ಲರನ್ನೂ ಕೆಲಸಗಾರರ ಪಟ್ಟಿಯಲ್ಲಿ ಅಳವಡಿಸಲಾಗುತ್ತದೆ. 2011 – 12 ನೆಯ ವರ್ಷದಲ್ಲಿ, ಭಾರತದಲ್ಲಿ ಈ ಕಾರ್ಮಿಕ ಜಗತ್ತಿನ ಗಾತ್ರವು 473 ದಶಲಕ್ಷವೆಂದು ಅಂದಾಜು ಮಾಡಲಾಗಿತ್ತು. ಇವರಲ್ಲಿ ಬಹುಪಾಲು ಜನರು ಹಳ್ಳಿಗಳಲ್ಲಿ ವಾಸಿಸುತ್ತಿರುವುದರಿಂದ, 'ಗ್ರಾಮೀಣ' ಕಾರ್ಯಶಕ್ತಿಯ ಶೇಕಡಾವಾರು ಅನುಪಾತದ ಸಂಖ್ಯೆ ನಗರದ ಕಾರ್ಯ ಶಕ್ತಿಗಿಂತ ಹೆಚ್ಚಾಗಿದೆ. 473 ದಶಲಕ್ಷ ಜನರಲ್ಲಿ ಮುಕ್ಕಾಲುಪಾಲು ಕೆಲಸಗಾರರು ಹಳ್ಳಿಗಳಿಗೆ ಸೇರಿದವರಾಗಿದ್ದಾರೆ.

ಭಾರತದಲ್ಲಿ ಗಂಡಸರೇ ಈ ಕಾರ್ಯಶಕ್ತಿಯ ಬಹುಸಂಖ್ಯೆಯ ಭಾಗವಾಗಿದ್ದಾರೆ. ಮಹಿಳಾ ಕೆಲಸಗಾರರು ಗ್ರಾಮೀಣ ಭಾಗದಲ್ಲಿ ಒಟ್ಟು ಕಾರ್ಯಶಕ್ತಿಯ ಮೂರನೇ ಒಂದು ಅಂಶದಷ್ಟು ಇದ್ದು, ನಗರದಲ್ಲಿ ಈ ಸಂಖ್ಯೆ ಕೇವಲ ಶೇಕಡಾವಾರು 20 ರ ಅನುಪಾತದಲ್ಲಿ ಇದೆ. ಮಹಿಳೆಯರು ವ್ಯಯಸಾಯದಲ್ಲಿ ತೊಡಗಿರುವುದರ ಜೊತೆಗೆ, ಅಡಿಗೆ ಮಾಡುವುದು, ನೀರು ತರುವುದು, ಅಡಿಗೆಗೆ ಉರುವಲುಗಳನ್ನು ಸಂಗ್ರಹಿಸುವುದು – ಈ ಕೆಲಸಗಳನ್ನು ಮಾಡುತ್ತಾರೆ. ಅವರಿಗೆ ಈ ಕೆಲಸಕ್ಕೆ ಪ್ರತಿಯಾಗಿ, ಯಾವುದೇ ನಗದು ಹಣವಾಗಲೀ, ಕಾಳು–ಕಡ್ಡಿಯಾಗಲೀ ದೊರಕುವುದಿಲ್ಲ. ಬಹುಪಾಲು ಸಂದರ್ಭಗಳಲ್ಲಿ ವೇತನವೂ ದೊರೆಯುವುದಿಲ್ಲ. ಈ ಕಾರಣಕ್ಕಾಗಿ ಇಂಥ ಮಹಿಳೆಯರನ್ನು ಕೆಲಸಗಾರರ ವರ್ಗದಲ್ಲಿ ಸೇರಿಸಲಾಗಿಲ್ಲ. ಇಂಥ ಮಹಿಳೆಯರನ್ನು ಸಹ 'ಕೆಲಸಗಾರರು' ಎಂದು ಪರಿಗಣಿಸಬೇಕೆಂದು ಆರ್ಥಿಕ ತಜ್ಞರು ಈಗ ಒತ್ತಾಯ ತರುತ್ತಿದ್ದಾರೆ.

(a) 'ಕೆಲಸಗಾರ' (ಕಾರ್ಮಿಕ) ಅಂದರೆ ಯಾರು ? 12

(b) ಯಾವುದನ್ನು ಒಟ್ಟು ದೇಶೀಯ ಉತ್ಪಾದನೆ ಎಂದು ಕರೆಯುತ್ತಾರೆ ? 12

(c) ಭಾರತದಲ್ಲಿ ಉದ್ಯೋಗದ ಲಕ್ಷಣವು ಯಾವ ಬಗೆಯದ್ದಾಗಿದೆ ? 12

(d) ಎಂಥ ಮಹಿಳೆಯರನ್ನು 'ಕೆಲಸಗಾರರು' ಎಂದು ಪರಿಗಣಿಸಲಾಗಿಲ್ಲ? 12

(e) ಭಾರತದಲ್ಲಿ ಕಾರ್ಯ ಶಕ್ತಿಯ ಜನಸಂಖ್ಯೆಯ ಅನುಪಾತ ಏನು ? 12

**Q3. ಕೆಳಕಂಡ ಪಠ್ಯವನ್ನು ಅದರ ಮೂರನೆಯ ಒಂದು ಭಾಗಕ್ಕೆ ಮೀರದಂತೆ ಸಂಗ್ರಹಿಸಿ ನಿಮ್ಮದೇ ಆದ ಪದಗಳಲ್ಲಿ ಬರೆಯಿರಿ ತಲೆ ಬರಹ ಕೊಡುವ ಅಗತ್ಯ ಇಲ್ಲ:** 60

ಅತಿ ಕಡಿಮೆ ಅರ್ಥಮಾಡಿಕೊಂಡಿರುವ ಆದರೆ ಹೆಚ್ಚಿಗೆ ಬಳಸುವ ಎರಡು ಪದಗಳೆಂದರೆ 'ನಾಗರಿಕತೆ' ಮತ್ತು 'ಸಂಸ್ಕೃತಿ'. ಮನುಕುಲ ಬೆಂಕಿಯ ಸಂಪರ್ಕಕ್ಕೆ ಬಂದಿದ್ದ ದಿನಗಳನ್ನು ಊಹಿಸಿಕೊಳ್ಳಿ. ಇಂದು ಪ್ರತಿಯೊಂದು ಮನೆಯೂ ತನ್ನ ಅಡುಗೆಗಾಗಿ ಬೆಂಕಿಯನ್ನು ಬಳಸುತ್ತಿದೆ. ಯಾವ ಮನುಷ್ಯ ಈ ಬೆಂಕಿಯನ್ನು ಮೊದಲ ಬಾರಿಗೆ ಕಂಡು ಹಿಡಿದನೋ ಆತನನ್ನೇ ಶ್ರೇಷ್ಠ ಅವಿಷ್ಕರ್ತನೆನ್ನಬಹುದಾಗಿದೆ. ಹಾಗೆಂತೋ ಸೂಜಿದಾರಗಳ ಪರಿಚಯವೇ ಇಲ್ಲದ ಮನುಕುಲದ ಕಾಲವನ್ನು ಊಹಿಸಿಕೊಳ್ಳಿ. ಕಬ್ಬಿಣದ ಮೂಲಕ ಸೂಜಿಗೆ ರೂಪವನ್ನು ಕೊಟ್ಟ ಮನುಷ್ಯನನ್ನೂ ನಾವು ಶ್ರೇಷ್ಠ ಅವಿಷ್ಕರ್ತನೆನ್ನ ಬಹುದಾಗಿದೆ.

ಈ ಎರಡು ಉದಾಹರಣೆಗಳನ್ನೇ ತೆಗೆದುಕೊಳ್ಳೋಣ. ಮೊದಲ ಉದಾಹರಣೆಯಲ್ಲಿ ಎರಡು ಅಂಶಗಳಿವೆ. ಅದರಲ್ಲಿ ಒಂದನೆಯದು ವ್ಯಕ್ತಿಯೊಬ್ಬನ ಶಕ್ತಿ ಬೆಂಕಿಯ ಅವಿಷ್ಕಾರಕ್ಕೆ ಕಾರಣವಾದದ್ದು, ಎರಡನೆಯದು ಬೆಂಕಿಯು ತನಗೆ ತಾನೇ ಅವಿಷ್ಕಾರಗೊಂಡದ್ದು. ಎರಡನೆಯ ಉದಾಹರಣೆಯಲ್ಲಿಯೂ ಅಷ್ಟೆ, ಸೂಜಿ ಮತ್ತು ದಾರದ ಅವಿಷ್ಕಾರಗಳಲ್ಲಿ ಬಳಕೆಯಾದ ಶಕ್ತಿ ಒಂದಾದರೆ ಎರಡನೆಯದು ಸೂಜಿದಾರಗಳು ತಮಗೆ ತಾವೇ ರೂಪುಗೊಂಡದ್ದು. ಯಾವ ವ್ಯಕ್ತಿಯ ಸಾಮರ್ಥ್ಯ ಅಭಿರುಚಿ ಅಥವಾ ಸ್ಫೂರ್ತಿಗಳಿಂದಾಗಿ ಬೆಂಕಿ, ಸೂಜಿ, ದಾರಗಳು ಅವಿಷ್ಕಾರಗೊಂಡಿವೆಯೋ ಅದು ಆ ವ್ಯಕ್ತಿಯ ಸಂಸ್ಕೃತಿಯೆನ್ನಬಹುದು. ಯಾವುದು ಇಂತಹ ಸಂಸ್ಕೃತಿಯಿಂದ ಅವಿಷ್ಕಾರವಾಯಿತೋ ಇಂತಹ ಯಾವ ಅವಿಷ್ಕಾರವನ್ನು ಅವನು ತನಗಾಗಿ, ಉಳಿದವರಿಗಾಗಿ ಮಾಡಿದನೋ ಅದನ್ನು

ನಾಗರಿಕತೆಯೆನ್ನಬಹುದು. ಹೀಗೆ ಒಬ್ಬ ಸುಸಂಸ್ಕೃತ ಮನುಷ್ಯ ಹೊಸ ಅವಿಷ್ಕಾರಗಳಿಗೆ ಕಾರಣನಾಗುತ್ತಾನೆ.

ಪೂರ್ವಜರಿಂದ ಆತನ ಸಂತತಿ ಅತನ ಅವಿಷ್ಕಾರಗಳಿಗೆ ಉತ್ತರಾಧಿಕಾರತ್ವವನ್ನು ಪಡೆದಿರುತ್ತದೆ. ಯಾವ ಮನುಷ್ಯ ತನ್ನ ಬುದ್ಧಿಶಕ್ತಿಯಿಂದ ಅಥವಾ ವಿವೇಕದಿಂದ ಹೊಸ ನೋಟಗಳಿಗೆ ಕಾರಣನಾಗುತ್ತಾನೋ ಆತನೇ ನಿಜವಾದ ಸುಸಂಸ್ಕೃತ ಮನುಷ್ಯ. ಆದರೆ ಆತನ ಯಾವ ಸಂತತಿ ತನ್ನ ಪೂರ್ವಜರಂತೆಯೇ ಅನ್ವೇಷಿಕ ಉತ್ತರಾಧಿಕಾರತ್ವವನ್ನು ಪಡೆದಿದೆಯೋ ಅದನ್ನು 'ನಾಗರಿಕತೆ'ಯೆನ್ನಬಹುದೇ ಹೊರತು 'ಸುಸಂಸ್ಕೃತ' ಎನ್ನಲಾಗದು. ಇದಕ್ಕೆ ಒಂದು ಆಧುನಿಕ ಉದಾಹರಣೆಯನ್ನು ತೆಗೆದುಕೊಳ್ಳೋಣ. ನ್ಯೂಟನ್ ಗುರುತ್ವಾಕರ್ಷಣ ಸಿದ್ಧಾಂತವನ್ನು ಕಂಡುಹಿಡಿದ. ಅವನು ಸುಸಂಸ್ಕೃತ ಮನುಷ್ಯ. ಆದರೆ ಭೌತಶಾಸ್ತ್ರದ ವಿದ್ಯಾರ್ಥಿಯೊಬ್ಬ ನ್ಯೂಟನ್‌ನ ಈ ಗುರುತ್ವಾಕರ್ಷಣ ಸಿದ್ಧಾಂತದ ಬಗ್ಗೆ ತಿಳಿದುಕೊಳ್ಳುವುದರ ಜೊತೆಗೆ ನ್ಯೂಟನ್‌ಗೆ ಪರಿಚಯವಿಲ್ಲದ ಅನೇಕ ವಿಷಯಗಳನ್ನು ತಿಳಿದುಕೊಂಡಿರಬಹುದು. ಇಷ್ಟೆಲ್ಲಾ ಇದ್ದಾಗಲೂ ಇಂದಿನ ಈ ಭೌತಶಾಸ್ತ್ರದ ವಿದ್ಯಾರ್ಥಿಯನ್ನು ನ್ಯೂಟನ್‌ಗಿಂತ ಮುಂದುವರಿದ 'ನಾಗರಿಕ'ನೆಂದು ಕರೆಯಬಹುದೇ ಹೊರತು 'ಸುಸಂಸ್ಕೃತ'ನೆಂದು ಕರೆಯಲಾಗದು.

ಬಹುಶಃ ಹಸಿವು ಬೆಂಕಿಯ ಅವಿಷ್ಕಾರಕ್ಕೆ ಸ್ಫೂರ್ತಿಯಾಗಿರಬಹುದು. ಅದೇ ರೀತಿ ಸೂಜಿ ದಾರಗಳ ಅವಿಷ್ಕಾರಗಳಲ್ಲಿ ದೇಹವನ್ನು ಉಷ್ಣ ಮತ್ತು ಶೀತದಿಂದ ರಕ್ಷಿಸಿಕೊಳ್ಳುವುದರ ಜೊತೆಗೆ ದೇಹವನ್ನು ಸಿಂಗರಿಸುವ ಉದ್ದೇಶವೂ ಇರಬಹುದು. ಈಗ ಒಮ್ಮೆ ಊಹಿಸಿಕೊಳ್ಳಿ. ಮನುಷ್ಯನೊಬ್ಬನ ಹೊಟ್ಟೆತುಂಬಿದೆ. ಬಟ್ಟೆಯಿಂದ ದೇಹ ಮುಚ್ಚಿಕೊಂಡಿದೆ. ತೆರೆದ ಆಕಾಶದ ಕೆಳಗೆ ಮಲಗಿ ರಾತ್ರಿಯ ಹೊಳೆಯುವ ನಕ್ಷತ್ರಗಳನ್ನು ನೋಡುತ್ತಿದ್ದಾನೆ. ಆದರೆ ನಿದ್ರಿಸಲಾಗುತ್ತಿಲ್ಲ, ಏಕೆಂದರೆ ಅವನ ಕುತೂಹಲವೆಲ್ಲವೂ ಮೇಲಿನ ತಟ್ಟೆಯಲ್ಲಿ ತುಂಬಿರುವ ಮುತ್ತುಗಳ ಕುರಿತೆ. ಕೇವಲ ಹೊಟ್ಟೆಯ ಹಸಿವನ್ನು ಹಿಂಗಿಸುವ, ನಗ್ನತೆಯನ್ನು ಮುಚ್ಚುವ ಅಭಿಲಾಷೆಯಷ್ಟೇ ಸಂಸ್ಕೃತಿಗೆ ಮೂಲವಲ್ಲ, ನಿಜವಾದ ಸುಸಂಸ್ಕೃತ ಮನುಷ್ಯ ತನ್ನ ಹೊಟ್ಟೆ ತುಂಬಿದಾಗಲೂ ಸುಮ್ಮನೆ ಕೂಡಲಾರ. ನಮ್ಮ ನಾಗರಿಕತೆಯ ಹೆಚ್ಚಿನ ಭಾಗವನ್ನು ನಾವು ಅಂತಹ ಸುಸಂಸ್ಕೃತ ವ್ಯಕ್ತಿಗಳಿಂದ ಪಡೆದುಕೊಂಡಿದ್ದೇವೆ. ಅವರ ಪ್ರಜ್ಞೆಯು ಪ್ರಾಥಮಿಕವಾಗಿ

ಬಾಹ್ಯ ಭೌತಿಕ ವಿದ್ಯಮಾನಗಳಿಂದ ಪ್ರಭಾವಿತವಾಗಿದೆ. ಆದರೆ ಕೆಲವು ಭಾಗಗಳನ್ನು ನಾವು ಋಷಿಗಳಿಂದಲೂ ಸಹ ಪಡೆದುಕೊಂಡಿದ್ದೇವೆ. ಆದರೆ ಅವರು ಯಾವುದೇ ನಿರ್ದಿಷ್ಟ ಭೌತಿಕ ಸ್ಫೂರ್ತಿಗಳಿಗೆ ಅಧೀನರಾಗದೆ ಅವರ ಆಂತರಿಕ ಸಹಜ ಸಂಸ್ಕೃತಿಯಿಂದ ಕೆಲವನ್ನು ಅರಿತುಕೊಂಡಿದ್ದಾರೆ. ರಾತ್ರಿಯ ನಕ್ಷತ್ರಗಳನ್ನು ನೋಡಿದ ಮೇಲೆ ನಿದ್ರಿಸದೆ ಇರುವ ಸಂತನೊಬ್ಬ ಇಂದಿನ ಜ್ಞಾನದ ಮೊದಲ ಅವಿಷ್ಕೃತ ವ್ಯಕ್ತಿಯಗಿದ್ದಾನೆ.

*(306 ಶಬ್ದ)*

**Q4. ಕೆಳಗಿನ ಗದ್ಯ ಭಾಗವನ್ನು ಇಂಗ್ಲೀಷಿಗೆ ಅನುವಾದಿಸಿ :** ***20***

ಸಮಯವು ಬಹುಮೂಲ್ಯವಾದದ್ದು. ನಿಜವಾದ ಸಂಗತಿಯೆಂದರೆ ಈ ಜಗತ್ತಿನಲ್ಲಿ ಕಾಲವೊಂದೇ ಸೀಮಿತವಾಗಿರುವಂಥದ್ದು. ನೀವು ಐಶ್ವರ್ಯವನ್ನು ಕಳೆದುಕೊಂಡರೆ ಅದನ್ನು ಮತ್ತೆ ಗಳಿಸಬಹುದು, ನೀವು ಮನೆಯನ್ನು ಕಳೆದುಕೊಂಡರೆ ಅದನ್ನು ಮರಳಿ ದೊರಕಿಸಿಕೊಳ್ಳಬಹುದು, ಆದರೆ ಕಾಲವನ್ನು ನೀವು ಕಳೆದುಕೊಂಡರೆ, ಆ ಕಾಲವನ್ನು ನೀವು ಮತ್ತೆ ಮರಳಿ ಪಡೆಯಲಾರಿರಿ.

ಜೀವನದಲ್ಲಿ ನಾವು ಏನಾದರೂ ಮಾಡಬೇಕೆಂದಿದ್ದರೆ, ನಾವು ಏನಾದರೂ ಆಗಬೇಕೆಂದು ಬಯಸಿದರೆ, ಆಗ ಕಾಲವನ್ನು ಅತ್ಯುತ್ತಮ ರೀತಿಯಲ್ಲಿ ಉಪಯೋಗಿಸುವುದನ್ನು ನಾವು ಕಲಿಯಬೇಕಾಗುತ್ತದೆ. ಕಾಲವನ್ನು ಸರಿಯಾದ ರೀತಿಯಲ್ಲಿ ಬಳಸಿದರೆ ನಾವು ಯಾವುದನ್ನು ಸಾಧಿಸಬೇಕೆಂದು ಅಂದುಕೊಂಡಿದ್ದೆವೆಯೋ ಅದನ್ನು ಸಾಧಿಸಲು ಸಾಧ್ಯ.

"ಕಾಲವು ಹಣ" ಎಂದು ಹೇಳಲಾಗಿದೆ. ಆದರೆ ಈ ಹೇಳಿಕೆಯು ಸಂಪೂರ್ಣವಾಗಿ ಸತ್ಯವಲ್ಲ, ನಿಜ ಯಾವುದೆಂದರೆ ಕಾಲವೊಂದೇ ಸಂಭಾವ್ಯ ಸಂಪತ್ತಾಗಿದೆ. ನೀವು ನಿಮ್ಮ ಕಾಲವನ್ನು ಸರಿಯಾಗಿ ಬಳಸಿದರೆ ಆಗ ಮಾತ್ರ ನೀವು ಸಂಪತ್ತನ್ನು ಗಳಿಸಬಹುದು. ಅದಲ್ಲದೆ ನೀವು ನಿಮ್ಮ ಕಾಲವನ್ನು ದುರುಪಯೋಗ ಮಾಡಿಕೊಂಡರೆ, ಸಂಪತ್ತನ್ನು ಗಳಿಸುವ ಸಾಧ್ಯತೆಯನ್ನು ನೀವು ಕಳೆದುಕೊಳ್ಳಬಹುದು. ಕಾಲವನ್ನು ಸರಿಯಾದ ರೀತಿಯಲ್ಲಿ ಬಳಸಲು

ನೀವು ಎಚ್ಚರಿಕೆ ವಹಿಸಿದರೆ, ನೀವು ಕಾಲವನ್ನು ವ್ಯರ್ಥ ಮಾಡುವುದನ್ನು ನಿಲ್ಲಿಸುವಿರಿ. ನೀವು ಕಾಲದ ಉತ್ತಮ ಬಳಕೆಯನ್ನು ಮಾಡುವ ದಾರಿಗಳನ್ನು ಹುಡುಕಲು ಪ್ರಾರಂಭಿಸುವಿರಿ. ಅತ್ಯಂತ ಕಡಿಮೆ ಸಮಯದಲ್ಲಿ, ಹೆಚ್ಚು ಕೆಲಸ ಮಾಡುವ ದಾರಿಗಳನ್ನು ಹುಡುಕಲು ನೀವು ಪ್ರಾರಂಭಿಸುವಿರಿ. ಸಮಯ ನಿರ್ವಹಣೆಯನ್ನು ನೀವು ನಿಜವಾಗಿಯೂ ಮಾಡಬೇಕು ಎಂದಿದ್ದರೆ, ಆಗ ನೀವು ಕೇವಲ ಪ್ರಜ್ಞಾಪೂರ್ವಕ ಮನಸ್ಸನ್ನು ಮಾತ್ರವಲ್ಲದೆ, ಸುಪ್ತ ಮನಸ್ಸನ್ನು ಉಪಯೋಗಿಸಬೇಕಾಗುತ್ತದೆ. ಇದು ಮಾತ್ರವೇ ನಿಮಗೆ ಕಡಿಮೆ ಸಮಯದಲ್ಲಿ, ಹೆಚ್ಚು ಕೆಲಸ ಮಾಡುವ ದಾರಿಗಳನ್ನು ಹುಡುಕುತ್ತದೆ ಮತ್ತು ಇದರ ಫಲವಾಗಿ ಮೂಡಿದ ಉತ್ಸಾಹವು ಯಶಸ್ವಿಯಾಗುವ ಹೊಸ ಮಾರ್ಗಗಳು ಯಾವುದು ಎಂಬುದನ್ನು ಹೇಳುತ್ತದೆ.

**Q5. ಕೆಳಗಿನ ಗದ್ಯ ಭಾಗವನ್ನು ಕನ್ನಡಕ್ಕೆ ಅನುವಾದಿಸಿ :** ***20***

We cannot deny the importance of games in life as games make a person sound in body and mind. Society expects of a person to fulfil all his duties, for which it is important for him to keep healthy. He may be very intelligent, but his intelligence is of no use if he is not healthy. In some ways, the human body is like a machine. If it is not made use of, it starts to work badly. People who are not fit grow weak; they become more prone to disease. Any form of game is useful, if it gives the body an opportunity to take regular physical exercise. Playing encourages the spirit of sportsmanship. It enables one to deal with life's problems in a wise and natural manner. The important thing in playing is not the winning or the losing, but the participation. We have to remember some other things about playing games. First, it is the physical exercise that is important for health, not the games themselves, and there are other ways of getting this. Is not India the home of yoga ? When we think of the phrase — a healthy mind in a healthy body — we should not forget that it is the mind which is mentioned first. And if we let games become the most important thing in our lives, then we undermine the importance of the mind.

**Q6.** **(a)** **ಕೆಳಗಿನ ಪದಗಳ ಕನ್ನಡ ರೂಪ ಬರೆಯಿರಿ :** *2×5=10*

(i) ಭಲ್ಲೂಕ *2*

(ii) ಸಹಸ್ರ *2*

(iii) ಜಲಜ *2*

(iv) ಕ್ಷಾಮ *2*

(v) ಸ್ವೇದ *2*

**(b)** **ಕೆಳಗಿನ ಪದಗಳ ಸಂಧಿರೂಪ ತಿಳಿಸಿ :** *2×5=10*

(i) ಚಂದ್ರೋದಯ *2*

(ii) ಹಸಿರೆಲ್ಲಿ *2*

(iii) ಹೂದೋಟ *2*

(iv) ಬ್ರಹ್ಮಾನುಭವಿ *2*

(v) ಬೇಯಿಸು *2*

**(c)** **ಈ ಕೆಳಗಿನ ಪದಗಳಲ್ಲಿನ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ :** *2×5=10*

(i) ಮರವನ್ನು *2*

(ii) ಹಣ್ಣಿನಲ್ಲಿ *2*

(iii) ಚಂದ್ರನಿಗೆ *2*

(iv) ಲಕ್ಷ್ಮಣನ *2*

(v) ಮರಳಿನಿಂದ *2*

**(d)** **ಕೆಳಗಿನ ಪದಗಳಿಗೆ ವಿರುದ್ಧಾರ್ಥ ಪದಗಳನ್ನು ಬರೆಯಿರಿ :** *2×5=10*

(i) ಹಿಗ್ಗು *2*

(ii) ಆದಾಯ *2*

(iii) ಆತಂಕ *2*

(iv) ಆಯಾಸ *2*

(v) ಸುಸಂಗತ *2*